# ಏಳೇಳು ಶರಧಿಯು ಏಕವಾಗಿದೆ ಕಂಡ್ಯ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao
3. **Note:** The wordings are as per Ref. 2 above.
4. **Note:** The lyrics in both the above references are almost same except few spelling differences which are not considered here. The singer has followed these wordings.

ರಾಗ ಸೌರಾಷ್ಟ್ರ ತಾಳ ಅಟ

ಏಳೇಳು ಶರಧಿಯು ಏಕವಾಗಿದೆ ಕಂಡ್ಯ
ಹ್ಯಾಗೆ ಬಂದೆ ಹೇಳೊ ಕೋತಿ ॥ ಪ ॥

ಏಳು ಶರಧಿಯು ಎನಗೆ ಏಳು ಕಾಲುವೆಯು
ತೂಳಿ ಲಂಘಿಸಿ ಬಂದೆ ಭೂತ ॥ ಅಪ ॥

ಏಳು ಸಮುದ್ರದೊಳಿರುವ ಮಕರಿ ಮತ್ಸ್ಯ
ಹ್ಯಾಗೆ ಬಿಟ್ಟರು ಹೇಳೊ ಕೋತಿ
ಏಳು ಸಮುದ್ರದ ಮಕರಿ ಮತ್ಸ್ಯದ ಕೂಡೆ
ಮಾತಾಡಿ ಬಂದೆನೊ ಭೂತ ॥ 1 ॥

ಲಂಕಾದ್ವಾರದೊಳೊಬ್ಬ ಲಂಕಿಣಿ ಇರುವಳು
ಹ್ಯಾಂಗೆ ಬಿಟ್ಟಳು ಹೇಳೊ ಕೋತಿ
ಲಂಕಿಣಿಯನು ಕೊಂದು ಶಂಕೆಯಿಲ್ಲದೆ ನಾನು
ಬಿಂಕದಿಂದಲಿ ಬಂದೆ ಭೂತ ॥ 2 ॥

ಕೊಂಬೆ ಕೊಂಬೆಗೆ ಕೋಟಿ ಮಂದಿ ರಾಕ್ಷಸರಿರೆ
ಹ್ಯಾಗೆ ಬಿಟ್ಟರು ಹೇಳೊ ಕೋತಿ
ಕೊಂಬೆ ಕೊಂಬೆಗೆ ಕೋಟಿ ಮಂದಿ ರಾಕ್ಷಸರನ್ನು
ಕೊಂದ್ಹಾಕಿ ಬಂದೆನೊ ಭೂತ ॥ 3 ॥

ಯಾವೂರೊ ಎಲೊ ನೀನು ಯಾವ ಭೂಮಿಯೊ ನಿಂದು
ಯಾಕೆ ಬಂದೆ ಹೇಳೊ ಕೋತಿ
ಯಾವ ವನದೊಳಗೆ ಜಾನಕಿದೇವಿ ಇದ್ದಳೊ
ಅವಳ ನೋಡ ಬಂದೆ ಭೂತ ॥ 4 ॥

ದಕ್ಷಿಣಪುರಿ ಲಂಕಾ ದಾನವರಿಗಲ್ಲದೆ
ತ್ರ್ಯಕ್ಷಾದ್ಯರಿಗಳವಲ್ಲ ಕೋತಿ
ಪಕ್ಷಿಧ್ವಜ ರಾಮನ ಅಪ್ಪಣೆ ಎನಗಿಲ್ಲ
ಈ ಕ್ಷಣ ತಪ್ಪಿಸಿಕೊಂಡೆ ಭೂತ ॥ 5 ॥

ದೂತನಾಗಿಹೆ ಎನ್ನ ಕೈಯೊಳು ಸಿಕ್ಕಿಹೆ
ಕೋಪವಿನ್ಯಾತಕೊ ಕೋತಿ
ನಾ ತಾಳಿಕೊಂಡಿಹೆನೊ ಈ ಕ್ಷಣದಿ ಲಂಕೆ
ನಿರ್ಧೂಮವನು ಮಾಳ್ಪೆ ಭೂತ ॥ 6 ॥

ನಿಮ್ಮಂಥ ದಾಸರು ನಿಮ್ಮರಸನ ಬಳಿ
ಎಷ್ಟು ಮಂದಿದ್ದಾರೊ ಕೋತಿ
ನನ್ನಂಥ ದಾಸರು ನಿನ್ನಂಥ ಹೇಡಿಗಳು
ಕೋಟ್ಯನುಕೋಟಿಯೊ ಭೂತ ॥ 7 ॥

ಎಲ್ಲಿಂದ ನೀ ಬಂದೆ ಏತಕೆಲ್ಲರ ಕೊಂದೆ
ಯಾವರಸಿನ ಭಂಟ ಕೋತಿ
ಚೆಲ್ವಯೋಧ್ಯಾಪುರದರಸು ಜಾನಕಿಪತಿ
ರಾಮಚಂದ್ರನ ಭಂಟ ಭೂತ ॥ 8 ॥

ಸಿರಿ ರಾವಚಂದ್ರನು ನಿನ್ನರಸನಾದರೆ
ಆತ ಮುನ್ನಾರು ಹೇಳೊ ಕೋತಿ

ಹಿರಣ್ಯಕನನು ಸೀಳಿ ಪ್ರಹ್ಲಾದಗೊಲಿದ
ಶ್ರೀ ಪುರಂದರ ವಿಠಲನೊ ಭೂತ || 9 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಇದು ಹನುಮಂತ ಮತ್ತು ರಾವಣ ಇವರ ನಡುವೆ ನಡೆದ ಸಂವಾದ. ರಾವಣನು ಹನುಮಂತನನ್ನು ಕೋತಿಯೆಂದು ಕರೆದರೆ ಹನುಮಂತನು ರಾವಣನನ್ನು ಭೂತವೆಂದು ಕರೆಯುತ್ತಾನೆ. ಇದರಲ್ಲಿ ಹನುಮಂತನ ಸಾಹಸದ ಸ್ವಾರಸ್ಯವಾದ ವರ್ಣನೆಯಿದೆ.

**ಏಳೇಳು ಶರಧಿಯು ಏಕವಾಗಿದೆ** – ಸಮುದ್ರಮಧ್ಯದಲ್ಲಿರುವ ಲಂಕಾಪುರವು ದುರ್ಗಮವಾದುದೆಂದೂ, ಅಜೇಯ್ಯವಾದುದೆಂದೂ ಪ್ರತೀತಿಯಿದ್ದಿತು. ಹನುಮಂತನು ಅಲ್ಲಿಗೆ ಬಂದುದನ್ನು ತಿಳಿದು ಲಂಕಾಧಿಪತಿಯಾದ ರಾವಣನಿಗೇ ಆಶ್ಚರ್ಯವಾಯಿತು.

**ಮಕರಿ ಮತ್ಸ್ಯ** – ಮೊಸಳೆ ಮೀನು.

**ತ್ರ್ಯಕ್ಷಾದ್ಯರಿಗಳವಲ್ಲ** – ತ್ರ್ಯಕ್ಷನೆಂದರೆ ಮುಕ್ಕಣ್ಣ, ಶಿವ; ಶಿವನೇ ಮೊದಲಾದ ದೇವತೆಗಳು ಕೂಡ ದಾನವರ ಬೀಡಾದ ಲಂಕೆಗೆ ಬರಲಾರರು.

**ಪಕ್ಷಿಧ್ವಜ** – ಗರುಡಧ್ವಜ.

**Classification:** Keerthane
**Ankita:** purandara vittala
**Location:** NA
**Category:** Hanuma Stuti,
**Sub-Category:** hanuma, Samudra, koti, lanka, mosale, asura, sita, rama, bhumi, kaadu, garuda, kai, sittu, arasa, prahallada, sundara kanda
**Pravachana:** Parimala Raghavendran
**Explanation:** NA